ಹೊಸ ಸಾರಿಗೆ ನೀತಿ

539 (504) ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಹೊಸ ಸಾರಿಗೆ ನೀತಿಯನ್ನು ತರಲು ಯೋಜಿಸಿದೆಯೇ;

ಆ) ಹಾಗಿದ್ದಲ್ಲಿ, ಇದಕ್ಕಾಗಿ ಸಮಿತಿಯನ್ನು ರಚಿಸಿದೆಯೇ;

ಇ) ರಚಿಸಿದ್ದಲ್ಲಿ, ಈ ಸಮಿತಿಯವರು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆಯೇ;

ಈ) ಹಾಗಿದ್ದಲ್ಲಿ, ಈ ಸಾರಿಗೆ ನೀತಿಯು ಯಾವಾಗಿನಿಂದ ಜಾರಿಗೆ ಬಂದಿದೆ?

ಶ್ರೀ ಪಿ.ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು):

ಅ) ಹೌದು.

ಆ) ಹೌದು (ಸಚಿವ ಸಂಪುಟದ ಉಪ ಸಮಿತಿ)

ಇ) ಹೌದು.

ಈ) ರಾಜ್ಯಾದಾದ್ಯಂತ ಸಾರಿಗೆ ಸಮೀಕ್ಷೆ ನಡೆಸಲು ಸರ್ಕಾರದ ಇತ್ತೀಚೆಗೆ ನಿರ್ದೇಶನಗಳನ್ನು ನೀಡಿದೆ ವರದಿಗಳನ್ನು ಸ್ವೀಕರಿಸಿದ ನಂತರ ಪರಿಶೀಲಿಸಿ ಜಾರಿಗೆ ತರಲು ಕ್ರಮಕ್ಕೆಗೊಳ್ಳಲಾಗುವುದು.

ರಾಷ್ಟ್ರೀಯ ಹೆದ್ದಾರಿಯಲ್ಲಿ ಕ್ರೇನ್ ಒದಗಿಸುವ ಬಗ್ಗೆ

540 (506) ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ): ಮಾನ್ಯ ಸಾರಿಗೆ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿಯಲ್ಲಿ ಅಪಘಾತಕ್ಕೀಡಾಗುವ ವಾಹನಗಳನ್ನು ತಕ್ಷಣ ಅಲ್ಲಿಂದ ತೆಗೆಯಲು ಹೆದ್ದಾರಿಯಲ್ಲಿ ಬರುವ ಜಿಲ್ಲೆಗಳಿಗೆ ಕ್ರೇನ್ ಒದಗಿಸುವ ಯೋಜನೆಯೇನಾದರೂ ಸರ್ಕಾರಕ್ಕೆ ಇದೆಯೇ;

ಆ) ಹಾಗಿದ್ದಲ್ಲಿ ಇದನ್ನು ಯಾವಾಗಿನಿಂದ ಒದಗಿಸುವಿರಿ?

ಶ್ರೀ ಪಿ.ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು):

ಅ) ಹೌದು.

ಆ) ರಾಜ್ಯ ರಸ್ತೆ ಸುರಕ್ಷತಾ ಸಮಿತಿಯವರು ಸಲ್ಲಿಸಲಾದ ಮನವಿಯಂತೆ, ಕೇಂದ್ರ ಭೂಸಾರಿಗೆ ಮಂತ್ರಾಲಯದವರು ನೀಡಲಾದ 25 ಲಕ್ಷ ರೂಪಾಯಿಗಳ ಅನುದಾನದ ಸಹಾಯದಿಂದ ಒಟ್ಟು 32 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಒಂದು ಕ್ರೇನ್ ಮತ್ತು ಒಂದು ಆಂಬುಲೆನ್ಸ್‌ನ್ನು 1996 ಮಾರ್ಚ್ ಮಾಹೆಯಲ್ಲಿ ಖರೀದಿಸಿ ರಾಷ್ಟ್ರೀಯ ಹೆದ್ದಾರಿ ನಂ.2 ರಲ್ಲಿ ತುಮಕೂರು ಮತ್ತು